# Smile Please Creations

*for every occasion, custom & handmade*

VOL: 8 NOVEMBER 2025


Subscribe

WELCOME TO OUR

# *Monthly Newsletter*

## Editorial

## Acrylic Haldi Kumkum box



These Acrylic haldi kumkum box is decorated with kundan and ball chains. They come in various attractive shapes. Inside, it has 3 small compartments.

## Karthigai Deepam

**Karthigai Deepam** in Tiruvannamalai is the main event of the ten-day Deepam festival held at the Annamalaiyar temple. In this, the Mahadeepam is lit on the top of the Tiruvannamalai hill. It is also known as the **"Sarvalaya Deepam"**.
This year it falls on 4th December.

## In this newsletter:


- Product Gallery - Page 2
- ರೀತಿ- ನೀತಿ - Page 3
- Children's Corner - Page 4
- ಕಲೆ-ನೆಲೆ - Page 5
- Dancing Steps - Page 6
- Puzzle Time - Page 7
- Winners & Ans for October months puzzles - Page 8
- Boggle Rules - Page 9

# Product Gallery

Handpainted on premarked MDF and embellished with stones, chains, mirrors, 3D Liners, etc..







# ಈ ತಿಂಗಳ ವಿಚಾರ

ಕಳಬೇಡ, ಕೊಲಬೇಡ,
ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ಕೂಡಲಸಂಗಮನನೊಲಿಸುವ ಪರಿ.

ಬಸವಣ್ಣನವರ ಈ ವಚನದಲ್ಲಿ ತಿಳಿಸಿರುವಂತೆ ನಮ್ಮ ಆಲೋಚನೆಗಳು ಸರಿಯಾಗಿದ್ದ ಪಕ್ಷದಲ್ಲಿ ನಮ್ಮ ಕಾರ್ಯಗಳು ಸಹ ಸರಿಯಾಗಿರುತ್ತವೆ. ಈಗ ಕಳಬೇಡ ಎಂಬುದರ ಕುರಿತು ಒಂದು ಕಥೆ.

## ರೀತಿ- ನೀತಿ

### ಕಥಾ ಮಾಲಿಕೆ-8

ಒಂದು ಶಾಲೆ. ಅಲ್ಲಿ ಐದನೇ ತರಗತಿ. ಒಬ್ಬ ವಿದ್ಯಾರ್ಥಿ ಅವನ ಜನ್ಮ ದಿನದಂದು ವಾಚ್ ಅನ್ನು ಹೆಮ್ಮೆಯಿಂದ ಕಟ್ಟಿಕೊಂಡು ಬಂದಿದ್ದ. ಎಲ್ಲರಿಗೂ ತೋರಿಸಿ ಬೀಗಿದ್ದ. ಎಲ್ಲರಿಗೂ ಅದರ ಮೇಲೆ ಕಣ್ಣು. ಎಲ್ಲರೂ ಮಧ್ಯಾಂತರ ವಿರಾಮದಲ್ಲಿ ಹೊರಗೆ ಹೋಗಿದ್ದಾಗ ಒಳಗೆ ಬಂದು ನೋಡಿದರೆ ಅವನ ವಾಚ್ ಕಾಣೆಯಾಗಿತ್ತು. ಅಳುತ್ತಾ ಅಧ್ಯಾಪಕರಲ್ಲಿ ವಿದ್ಯಾರ್ಥಿ ದೂರನ್ನು ಹೇಳಿದ. ನನ್ನ ವಾಚ್ ಕಳೆದುಕೊಂಡರೆ ಅಪ್ಪ ಮನೆಗೆ ಸೇರಿಸುವುದಿಲ್ಲ ಎಂದು ಅತ್ತ. ಗುರುಗಳು ಯೋಚನೆ ಮಾಡಬೇಡ. ಹುಡುಕೋಣ ಎಂದು ಎಲ್ಲರನ್ನೂ ಸಾಲಾಗಿ ನಿಲ್ಲಿಸಿ ಎರಡು ಕೈಗಳನ್ನು ಹಿಂದಕ್ಕೆ ಕಟ್ಟಿ, ಕಣ್ಣು ಮುಚ್ಚಿ ನಿಲ್ಲುವಂತೆ ನಿರ್ದೇಶಿಸಿದರು. ನಂತರ ಎಲ್ಲರ ಜೋಬಿನೊಳಗೆ ಕೈ ಹಾಕಿ ಪರಿಶೀಲಿಸಿದ ನಂತರ ಎಲ್ಲಾ ವಿದ್ಯಾರ್ಥಿಗಳನ್ನು ಕಣ್ಣು ತೆರೆಯಲು ಹೇಳಿದರು. ಅವರ ಕೈಗಳಲ್ಲಿ ಕಳೆದು ಹೋದ ವಾಚು ಇದ್ದಿತು. ಅದನ್ನು ಅದರ ವಾರಸುದಾರನಿಗೆ ಕೊಟ್ಟು ಮತ್ತೆ ಈ ತರಹ ಸುಂದರ,ಬೆಲೆ ಬಾಳುವ, ಇನ್ನೊಬ್ಬರನ್ನು ಪ್ರಚೋದಿಸುವ ವಸ್ತುಗಳನ್ನು ತರಬಾರದು ಎಂದು ಹೇಳಿದರು. ಆ ವಾಚನ್ನು ಕದ್ದ ಹುಡುಗನಿಗೆ ಪುಕಪುಕ. ಇನ್ನು ತನ್ನನ್ನು ಶಾಲೆಯಿಂದ ಟಿಸಿ ಕೊಟ್ಟು ಕಳುಹಿಸುತ್ತಾರೆ, ಎಂದು ಹೆದರಿದ. ಆದರೆ ಗುರುಗಳು ಯಾವುದರ ಬಗ್ಗೆಯೂ ಮಾತೇ ಆಡಲಿಲ್ಲ. ಶಾಲೆ ಮುಗಿದ ನಂತರ ಆ ವಿದ್ಯಾರ್ಥಿ ಗುರುಗಳ ಬಳಿಗೆ ಬಂದು ತನ್ನ ಹೆಸರನ್ನು ಶಾಲೆಯಲ್ಲಿ ಎಲ್ಲರೆದುರು ಹೇಳಿ ಅವಮಾನಿಸದಿದ್ದಕ್ಕೆ ಅಳುತ್ತಾ ಧನ್ಯವಾದ ಅರ್ಪಿಸಿದ. ಗುರುಗಳು ನೀನೇನಾ ಅದನ್ನು ತೆಗೆದುಕೊಂಡದ್ದು. ನನಗೆ ಗೊತ್ತಿರಲಿಲ್ಲ. ನಾನು ಸಹ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಎಲ್ಲರ ಜೋಬಿಗೆ ಕೈ ಹಾಕಿದ್ದೆ. ನಾನು ಯಾರಿಗೂ ತಿಳಿಸುವುದಿಲ್ಲ, ಹೆದರಬೇಡ. ಇನ್ನು ಮುಂದೆ ಈ ರೀತಿ ಮಾಡಬೇಡ ಎಂದು ತಿಳಿ ಹೇಳಿದರು.

ಮಕ್ಕಳೇ ನಮಗೆ ಇನ್ನೊಬ್ಬರ ವಸ್ತುವನ್ನು ನೋಡಿ ಆಸೆಯಾಗುವುದು ಸಹಜ. ಕದಿಯುವುದು ಅಭ್ಯಾಸವಾದರೆ ಅದು ಮುಂದೆ ಚಟವಾಗಿ ಮಾರ್ಪಟ್ಟು ಬದುಕನ್ನೇ ನಾಶ ಮಾಡುತ್ತದೆ ಹಾಗೂ ಇಲ್ಲದ ಅವಮಾನವಾಗುತ್ತದೆ.

**ಶ್ರೀಲತಾ, ಹಾಸನ**



www.smilepleasecreations.com

# Children's corner

## Germany



Saketh M. Rao,
Age: 8 years, USA

Have you been to Berlin? I haven't, but my dad was born there. I don't think he remembers anything there, since he only stayed there for 2 years, but I have got some good facts about Berlin.
Oh! have you been to ***Disneyland***? Have you been to the **Sleeping Beauty Castle**? Hear this: The Sleeping Beauty Castle was inspired by the ***Neuschwanstein castle***.



**Holidays:** Germany has a whole bunch of holidays. The biggest one is **Christmas**. Other holidays such as Unity Day and three kinds day are also very big. In Christmas, a lot of Christmas shops are set up. They sell a lot of ornaments most of them shimmering like stars on the Christmas tree.



**Food: Bretzels** are basically just Bread Pretzels, and in Germany they put them together and it becomes Bretzels. Bretzels are big for a person though. They are warm and once bite the Bretzel, you can feel the soft cushiony part of the Bretzel. Other foods like **Spaetzle**, are very popular. Spaetzle is gooey and slimy. Once you cook Spaetzle, it looks like Pasta.




**Famous Sites:** Famous sites in Germany such as **The Colonial Cathedral** and **The Neuschwanstein Castle** are humungously famous for the size, what they stand for, and the popularity. They also may be popular because of the beauty of the famous sites.




**Lands and Borders**: Germany boarders many countries. They are *Czech Republic, Austria, France, Luxembourg, Netherlands, Poland, Denmark, Belgium* and *Switzerland*. Landmarks such as **The Alps** and **Zugspitze** are really big. The Zugspitze is the biggest mountain in Germany. Germany is a nice place to go. Why don't you go and have fun!!

# ಕಲೆ-ನೆಲೆ

## ಜೈ ಕರ್ನಾಟಕ ಮಾತೆ

ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ|
ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು|
ಕನ್ನಡವೇ ಸತ್ಯ, ಕನ್ನಡವೇ ನಿತ್ಯ|
ಹಸಿರಾಗಲಿ ಕರ್ನಾಟಕ, ಉಸಿರಾಗಲಿ ಕನ್ನಡ|
ತಾಯಿ ಕನ್ನಡಾಂಬೆಗೆ ಜಯವಾಗಲಿ||

ಸಮಸ್ತ ಕನ್ನಡಿಗರ ಕುಟುಂಬಕ್ಕೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನವೆಂಬರ್ ಒಂದನೇ ತಾರೀಕು ಕರ್ನಾಟಕದಲ್ಲಿ ರಾಜ್ಯೋತ್ಸವ ದಿನ ಆಚರಿಸಲಾಗುತ್ತದೆ. ಆದರೆ ನಾವೆಲ್ಲ ಬರೀ ನವೆಂಬರ್ ತಿಂಗಳು ಬಿಟ್ಟು ಪೂರ್ತಿ ವರ್ಷ ಕನ್ನಡಕ್ಕಾಗಿ ಬಯಸಬೇಕು, ಅಲ್ಲವೇ.

ಇದೇ ನವೆಂಬರ್ ನಲ್ಲಿ ಕಾರ್ತಿಕ ಮಾಸ ನಡೆಯುತ್ತಿದೆ. ಮನೆ ಮನೆಗಳಲ್ಲಿ ತುಳಸೀ ಪೂಜೆ, ದೀಪ ಹಚ್ಚುವುದು, ದೇವಸ್ಥಾನಗಳಲ್ಲಿ ಕಾರ್ತಿಕ ದೀಪಾರಾಧನೆ ಬಹಳ ಸಂಭ್ರಮದಿಂದ ನಡೆಸುತ್ತೇವೆ. ಈ ಬಾರಿ ಕಲೆ ನೆಲೆ ಸರಣಿಯಲ್ಲಿ ಕಾರ್ತಿಕದಲ್ಲಿ ಬರುವ ತುಳಸಿ ಪೂಜೆ ಮಾಡುವ ಬಗ್ಗೆ ತಿಳಿಯೋಣ. ದೀಪಾವಳಿಯ ನಂತರ ಬರುವ ಕಾರ್ತಿಕ ಶುದ್ಧ ದ್ವಾದಶಿಯಂದು ತುಳಸಿ ಮಾತೆಯೊಂದಿಗೆ ನೆಲ್ಲಿಕಾಯಿ ಇರುವ ನಲ್ಲಿ ಕೊನೆಯನ್ನು ಇಟ್ಟು ಕೃಷ್ಣನೊಂದಿಗೆ ವಿವಾಹ ಮಾಡುವ ಪ್ರಥ ನಡೆದು ಬಂದಿದೆ. ಅತಿ ಸುಂದರಿ, ಲಾವಣ್ಯವತಿ, ಪತಿವ್ರತೆ ಸ್ತ್ರೀಯಾದ ವೃಂದ ಜಲಂಧರ (ಶಿವನ ಹಣೆಗಣ್ಣಿನಿಂದ ಸೃಷ್ಟಿಯಾದವನು) ನೆಂಬ ರಾಕ್ಷಸನ ಪತ್ನಿ ಆಗಿರುತ್ತಾಳೆ. ಅವಳ ಪಾತಿವ್ರತ್ಯದ ಫಲದಿಂದ ಆ ರಾಕ್ಷಸನನ್ನು ಯಾರಿಂದಲೂ ಸೋಲಿಸಲಾಗುವುದಿಲ್ಲ. ಆಗ ದೇವತೆಗಳು ಅವಳ ಪಾತಿವ್ರತ್ಯವನ್ನು ಭಂಗಗೊಳಿಸಲು ವಿಷ್ಣುವಿನ ಮೊರೆ ಹೋಗುತ್ತಾರೆ. ವಿಷ್ಣುವು ಜಲಂಧರನ ವೇಷದಲ್ಲಿ ಬಂದು ಅವಳನ್ನು ವರಿಸುತ್ತಾನೆ. ಅವಳ ಪಾತಿವ್ರತ್ಯ ಭಂಗವಾಗಿದ್ದರಿಂದ ಜಲಂಧರನ ವಧೆಯಾಗುತ್ತದೆ. ವಿಷಯ ತಿಳಿದ ವೃಂದ ವಿಷ್ಣುವಿಗೆ ಕಲ್ಲಾಗು ಎಂದು ಶಪಿಸುತ್ತಾಳೆ. ಆಗ ವಿಷ್ಣು ಸಾಲಿಗ್ರಾಮ ಶಿಲೆಯಾಗುತ್ತಾನೆ. ಅವನು ಸುಂದರಿ ವೃಂದಳಿಗೆ ಮುಂದಿನ ಜನ್ಮದಲ್ಲಿ ನೀನು ಪವಿತ್ರವಾದ ತುಳಸಿ ಗಿಡವಾಗಿ ಎಲ್ಲರ ಮನೆಯ ಮುಂದೆ ರಾರಾಜಿಸುವೆ. ಆಗ ನಾನು ಕಾರ್ತಿಕ ಶುದ್ಧ ದ್ವಾದಶಿಯಂದು ನಿನ್ನೊಡನೆ ವಿವಾಹವಾಗುತ್ತೇನೆ. ಆ ದಿನ ನೀನು ಎಲ್ಲಾ ಸುವಾಸಿನಿಯರಿಂದ ಪೂಜಿಸಿಕೊಳ್ಳುವೆ, ಎಂದು ವರ ಕೊಡುತ್ತಾನೆ. ಅದರಂತೆ ಪ್ರತಿ ವರ್ಷ ವೃಂದ ತುಳಸಿಯಾಗಿ ಕೃಷ್ಣನೊಂದಿಗೆ ಪೂಜೆಗೊಳ್ಳುತ್ತಾಳೆ.



ಮೂಲತೋ ಸರ್ವತೀರ್ಥಾನಿ,
ಮಧ್ಯತೋ ಸರ್ವ ದೇವತಾಃ,
ಅಗ್ರತೋ ಸರ್ವ ವೇದಾಶ್ಚ,
ತುಳಸಿ ತ್ವಂ ನಮಾಮ್ಯಹಂ||

ತುಳಸಿ ಮಾತೆಯ ಜೊತೆ ಕರ್ನಾಟಕ ಮಾತೆಯ ಆಶೀರ್ವಾದ ಸಹ ಎಲ್ಲರಿಗೂ ದೊರೆಯಲಿ ಎಂದು ಆಶಿಸುತ್ತೇನೆ.

**ಪುಷ್ಪ ನಾಗಭೂಷಣ**
ಸಂಪರ್ಕ: 9937768618
ಹಾಸನ

# World's First Grand Premiere



Bharata's Natyashastra explains the world's first drama production that was presented under his direction. After Brahma entrusted the responsibility of Natyaveda to Bharata, he then taught it to his 100 children and decided to bring a dramatic experience that was never experienced before. As per the dating of the treatise this theatre was produced nearly 2200 years ago. Then how was the theatre back then, when there were no lights and auditoriums? The stage was built by the cosmic architect – Vishwakarma , actors were Bharata's children and the audience were none other than the gods and the demons. Lights were arranged by oil lamps and torches, placed around the stage for uniform distribution of light. The stage was decorated with paintings and mirror embedded designs which reflected the lights. For the debut, the iconic narrative of the Samudra manthan – the churning of the cosmic ocean was selected. The play showed the victory of gods over demons which angered Asuras as they thought Bharata was mocking them. They felt ridiculed by the portrayal and the outcome, failed to realise the fact that a drama is just an imitation of a reality. They attached on the performance site disrupting the drama and by creating chaos. The art was in peril until Indra intervened and he created the divine weapon Jarjara- a banner staff to protect the stage and the art. With the demons subdued, the drama resumed. The gods were captivated and immensely pleased by the ground breaking presentation and showered Bharata and his sons with lots of gifts. And that's how the first ever theatrical experience was magical and also a legendary hit.

**Vaishnavi J Koundinya**

# Boggle Time

| | | | |
|---|---|---|---|
| H | W | R | P |
| E | S | T | A |
| M | A | E | N |
| V | U | R | N |

**Point calculation**
5 letters - 1 point
6 letters - 2 points
7 letters - 3 points
8 letters - 4 points
9 letters - 9 points
10 letters - 10 points

Rules of the game -Form as many words as possible --> Rules given in next page

Send words with 5 letters and more
The names of 2 highest scorers will be announced in the next newsletter

## ಈ ಬಾರಿಯ ಸಮಸ್ಯೆ

ಯಾವುದು ಮೂಲೆಯಲ್ಲಿ ಕುಳಿತು ಪ್ರಪಂಚವನ್ನೆಲ್ಲ ಸುತ್ತುತ್ತದೆ?

**Send in your answers on email or WhatsApp before 15th December**

newsletter@smilepleasecreations.com
**+91 6366684838**

Link to October Newslettter

**Follow us on**

YouTube
@SmilePleaseCreations5

in
@Smile Please Creations

query@smilepleasecreations.com

# Previous Months Answers

## Boggle Time

Please note that all the possible words are not listed here. Our focus in mainly on the longer words

| | | | |
|---|---|---|---|
| Cream | donate | starch | Lathers |
| Clash | hears | trash | Thermal |
| Crate | Heart | tears | Others |
| Chart | hater | poster | Postal |
| Charts | haters | pears | Strand |
| Charm | march | Operands | Clasp |
| Carts | marsh | Personal | Earth |
| Crash | spear | Persona | Opera |
| Water | stare | Another | Spear |
| Petal | straw | Cartons | |
| Pearl | stream | | |
| Sonar | share | | |
| Caste | steal | | |
| Hearts | | | |

Congratulations!

**Winner**

Padma Bharadwaj - 39 points

| | | | |
|---|---|---|---|
| M | L | C | W |
| A | R | A | H |
| E | T | S | N |
| H | P | O | D |

## ಹಿಂದಿನ ತಿಂಗಳ ಸಮಸ್ಯೆಗೆ ಉತ್ತರ

ಓರ್ವ ವ್ಯಕ್ತಿ ತನ್ನ ಮನೆಯ ನಾಲ್ಕೂ ಪಾರ್ಶ್ವಗಳನ್ನು ದಕ್ಷಿಣಕ್ಕೆ ಅಭಿಮುಖವಾಗಿ ಕಟ್ಟುತ್ತಾನೆ. ಅದರ ಮುಂದೆ ಒಂದು ಕರಡಿಯು ಹಾದು ಹೋಗುತ್ತದೆ. ಆ ಕರಡಿಯ ಬಣ್ಣವೇನು?
ಉತ್ತರಿಸಿ ಮತ್ತು ಉತ್ತರವನ್ನು ಸ್ಪಷ್ಟೀಕರಿಸಿ.

ದಕ್ಷಿಣ ದಿಕ್ಕಿನಲ್ಲಿ ಮನೆಯ ಎಲ್ಲಾ ಬಾಗಿಲುಗಳಿರುವುದು ಉತ್ತರ ಧ್ರುವದಲ್ಲಿ ಮಾತ್ರ.
ಉತ್ತರ ಧ್ರುವದಲ್ಲಿ ಮನೆಯ ಹಾಗೂ ಕಿಟಕಿಯ ಬಾಗಿಲುಗಳನ್ನು ದಕ್ಷಿಣದ ಕಡೆಗೆ ಇಡುತ್ತಾರೆ. ಏಕೆಂದರೆ ಅಲ್ಲಿಂದ ಸೂರ್ಯರಶ್ಮಿ ಹೆಚ್ಚು ಒಳಗೆ ಬರಲಿ ಎಂದು. ಧ್ರುವೀಯ ಪ್ರದೇಶಗಳಲ್ಲಿ ಇರುವುದು ಹಿಮಕರಡಿ. ಮನೆಯ ಮುಂದೆ ಕರಡಿ ಹಾದುಹೋದರೆ ಅದು ಹಿಮಕರಡಿಯಾದ್ದ ಕಾರಣ ಅದರ ಬಣ್ಣ ಬಿಳಿಯದಾಗಿರುತ್ತದೆ.

Congratulations!


**Winner**

Padma Bharadwaj

# Boggle Rules

Words must be at least five letters long and formed by connecting adjacent letters horizontally, vertically, or diagonally. Each letter can only be used once in a word, and no letter cube can be jumped over.

## CORRECT




## WRONG

